# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 230(257) |
| ಉತ್ತರಿಸಬೇಕಾದ ದಿನಾಂಕ | : | 06.12.2023 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಂತ್ಯಸಂಸ್ಕಾರ ಸಹಾಯನಿಧಿ ಯೋಜನೆಯಡಿಯಲ್ಲಿ 2023-24ನೇ ಸಾಲಿನಲ್ಲಿ ಸಹಾಯಧನ ಬಯಸಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು: ಸಹಾಯಧನ ಪಡೆದವರ ಸಂಖ್ಯೆ ಎಷ್ಟು:(ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಅಂತ್ಯಸಂಸ್ಕಾರ ಯೋಜನೆಯಡಿ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. |
| ಆ) | ಬಡ ಕುಟುಂಬ ಸದಸ್ಯರು ಮರಣ ಹೊಂದಿದ ವೇಳೆ ಅಂತ್ಯಸಂಸ್ಕಾರ ನಡೆಸಲು ಸರ್ಕಾರದಿಂದ ಲಭಿಸುತ್ತಿದ್ದ 5 ಸಾವಿರ ಸಹಾಯಧನ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;, ಹಾಗಿದ್ದಲ್ಲಿ ಸ್ಥಗಿತಗೊಳಿಸಿರುವುದಕ್ಕೆ ಸ್ಪಷ್ಟ ಕಾರಣಗಳನ್ನು ನೀಡುವುದು; | ಸರ್ಕಾರದ ಸುತ್ತೋಲೆ ಸಂಖ್ಯೆ: ಡಿ.ಎಸ್.ಎಸ್.ಪಿ/ಎ.ಎಸ್.ವೈ/3/2022 ದಿನಾಂಕ: 10/05/2022 ರಂತೆ ದಿನಾಂಕ:01/09/2021 ರಿಂದ ಅನ್ವಯವಾಗುವಂತೆ ಅಂತ್ಯ ಸಂಸ್ಕಾರ ಯೋಜನೆಯನ್ನು ಮುಕ್ತಾಯಗೊಳಿಸಿದೆ.<br><br>ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಮುಖ್ಯ ವ್ಯಕ್ತಿ ಮರಣ ಹೊಂದಿದಲ್ಲಿ ಆ ಕುಟುಂಬದ ನೆರವಿಗಾಗಿ ರೂ.20000/-ಗಳ ಸಹಾಯ ಧನವನ್ನು ನೀಡಲಾಗುತ್ತಿದೆ.<br><br>ಅಂತ್ಯ ಸಂಸ್ಕಾರ ಯೋಜನೆ ಮತ್ತು ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಎರಡು ಯೋಜನೆಗಳು ಸಮಾನಾಂತರ ಯೋಜನೆಗಳಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ಸದಸ್ಯರ ಮರಣ ಸಂದರ್ಭದಲ್ಲಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಅಂತೆಯೇ ಆರ್ಥಿಕ ಇಲಾಖೆ ಟಿಪ್ಪಣಿಸಂಖ್ಯೆ:ಆಇ/462/ವೆಚ್ಚ-7/2021 ದಿನಾಂಕ: 17/07/2021 ರಲ್ಲಿ 2021-22ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಯಾವುದೇ ಅರ್ಜಿ ಸ್ವೀಕರಿಸದಿರಲು ಸೂಚಿಸಿದ್ದು. ಟಿಪ್ಪಣಿ ಸಂಖ್ಯೆ: ಆಇ/462/ವೆಚ್ಚ-7/2021 ದಿನಾಂಕ:7/02/2022ರಲ್ಲಿ ಆಗಸ್ಟ್ 2021ರ ಅಂತ್ಯಕ್ಕೆ ಸ್ವೀಕೃತವಾಗಿರುವ ಅರ್ಜಿಗಳಿಗೆ |

| | | |
|---|---|---|
| | | ಸೌಲಭ್ಯ ವಿತರಿಸಲು ಅಗತ್ಯವಿದ್ದ ಅನುದಾನ ಒದಗಿಸಿ ಅಂತ್ಯ ಸಂಸ್ಕಾರ ಯೋಜನೆಯನ್ನು ಮುಕ್ತಾಯಗೊಳಿಸಲು ತಿಳಿಸಿದೆ. |
| ಆ) | ಬಡ ಜನರಿಗೆ ಕಷ್ಟ ಕಾಲದಲ್ಲಿ ನೆರವಾಗುತ್ತಿದ್ದ ಅಂತ್ಯ ಸಂಸ್ಕಾರ ಸಹಾಯನಿಧಿ ಯೋಜನೆಯನ್ನು ಸ್ಥಗಿತಗೊಳಿಸಿದರೆ ಬಡ ಕುಟುಂಬಗಳಿಗೆ ಕಷ್ಟ ಕಾಲದಲ್ಲಿ ಸಾಂತ್ವನ ಮೊತ್ತಕ್ಕೆ ತಡೆ ಹಾಕಿದಂತಾಗುವುದಿಲ್ಲವೇ; ಅವರಿಗೆ ಕಷ್ಟಕಾಲದಲ್ಲಿನೆರವಾಗುತ್ತಿದ್ದ ಅಂತ್ಯಸಂಸ್ಕಾರ ಸಹಾಯ ನಿಧಿಯನ್ನು ನಿಲ್ಲಿಸಿದರೆ ಬಡ ಕುಟುಂಬಗಳು ಪರದಾಡುವಂತಾಗುವುದಿಲ್ಲವೇ; ಸಹಾಯ ಧನ ಮುಂದುವರಿಸಲು ಸರ್ಕಾರ ಕ್ರಮವಹಿಸುವುದೇ? | ರಾಷ್ಟ್ರೀಯ ಕುಟುಂಬ ನೆರವು ಯೋಜನೆಯು ಅನುಷ್ಠಾನದಲ್ಲಿರುವುದರಿಂದ ಅಂತ್ಯ ಸಂಸ್ಕಾರ ಯೋಜನೆಯನ್ನು ಪುನರ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ. |

**ಕಡತ ಸಂಖ್ಯೆ:ಆರ್‌ಡಿ 28 ಕೆಎಟಿ ಎಸ್‌ಎಸ್‌ಪಿ 2023**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**